**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1679/2022**

| | | | |
|---|---|---|---|
| **ಹೆಸರು** | **:** | **ವಿನೋದ ಚೌವಾಣ** | **ಚಾ.ಸಾ. 1** |
| **ತಂದೆಯ ಹೆಸರು** | **:** | **ಪಾಂಡುರಂಗ** | **ಪ್ರಾ.ಸಾ. 1** |
| **ವಯಸ್ಸು** | **:** | **36 ವರ್ಷ** | **ದಿನಾಂಕಃ 26-09-2025** |
| **ಉದ್ಯೋಗ** | **:** | **ಪಿಡಿಒ** | |
| **ವಾಸಸ್ಥಳ** | **:** | **ಅಣವಾರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನವೆಂಬರ 2021 ರಿಂದ ಇಲ್ಲಿಯವರೆಗೆ ಅಣವಾರ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ ಎಂದು ಕಾರ್ಯನಿರ್ವಹಿಸುತ್ತಿದ್ದೇನೆ.

ಚಾಸಾ-2 ರಿಂದ 7ರವರು ನನಗೆ ಗೊತ್ತು. ಚಾಸಾ-6ರವರು ಗ್ರಾಮ ಪಂಚಾಯಿತಿ ಸದಸ್ಯರಿರುತ್ತಾರೆ. ಆರೋಪಿ ನನಗೆ ಗೊತ್ತು. ಅವರು ಅಣವಾರ ಗ್ರಾಮದವರು. ಆರೋಪಿತನು ದಿನಾಂಕ 23-12-2021ರಂದು ತನ್ನ ಮನೆಯ ಮುಂದೆ ಇರುವ ಸಿಸಿ ರಸ್ತೆಯನ್ನು ಒಡೆದು ಮನೆ ಕಟ್ಟಿಕೊಳ್ಳುತ್ತಿದ್ದು ಮತ್ತು ದಿನಾಂಕ 31-01-2022ರಂದು ಆರೋಪಿಗೆ ನೋಟಿಸನ್ನು ನೀಡಿ ನೀವು ಒಡೆದಿರುವ ಸಿಸಿ ರಸ್ತೆಯನ್ನು ದುರಸ್ತಿ ಮಾಡಿಸಿಕೊಡಿ ಎಂದು ತಿಳಿಸಿದರು ಸಹ ಆರು ತಿಂಗಳ ನಂತರ ಆರೋಪಿ ಸಿಸಿ ರಸ್ತೆಯನ್ನು ದುರಸ್ತಿ ಮಾಡಿಸಿಕೊಟ್ಟಿರುತ್ತಾರೆ. ಆರೋಪಿ ಸದರಿ ಸಿಸಿ ರಸ್ತೆಯನ್ನು ದುರಸ್ತಿ ಮಾಡಿಸಿಕೊಡದೇ ಇದ್ದಾಗ ದಿನಾಂಕ 09-04-2022 ರಂದು ದೂರನ್ನು ನೀಡಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ದಿನದಂದು ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಆ ಸಮಯಕ್ಕೆ ಪಡೆದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2ರ ಭಾವಚಿತ್ರದಲ್ಲಿ ಆರೋಪಿ ಸಿಸಿ ರಸ್ತೆಯನ್ನು ಒಡೆದು ಗೋಡೆ ಕಟ್ಟಿರುವುದು ಕಾಣುತ್ತದೆ. ರಸ್ತೆ ಒಡೆದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ HGH ವಕೀಲರಿಂದಃ**

ಅಲ್ಲಿದ್ದ ರಸ್ತೆ ತಾನಾಗಿಯೇ ಒಡೆದು ಮತ್ತು ಗ್ರಾಮಸ್ಥರು ಆರೋಪಿ ವಿರುದ್ದ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸುವ ಮೊದಲು ಸ್ಥಳದಲ್ಲಿದ್ದ ರಸ್ತೆಯನ್ನು ನಾನು ಅಳೆದಿಲ್ಲ.

ಆರೋಪಿ ಎಷ್ಟು ರಸ್ತೆಯನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಉಲ್ಲೇಖವಿಲ್ಲ ಎಂದರೆ ಸಾಕ್ಷಿ 2 ಪೀಟ್ ರಸ್ತೆ ಅತಿಕ್ರಮಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ 2 ಪೀಟ್ ರಸ್ತೆ ಅತಿಕ್ರಮಣ ಮಾಡಿದ್ದಾರೆ ಎಂದು ನನಗೆ ದೂರಿನಲ್ಲಿ ಉಲ್ಲೇಖವಿಲ್ಲ. ದೂರು ನೀಡುವ ಮೊದಲು ರಸ್ತೆಯ ಅಳತೆ ಎಷ್ಟು ಇತ್ತು ಅಷ್ಟೇಯೇ ಈಗಲೂ ಸಹ ಇದೆ ಎಂದರೆ ಸಾಕ್ಷಿ ಅದನ್ನು ಆರೋಪಿ ಈಗ ದುರಸ್ತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಪೇಬ್ರುವರಿ ತಿಂಗಳಲ್ಲಿ ಗ್ರಾಮಸ್ಥರು ನನಗೆ ದೂರನ್ನು ನೀಡಿರುತ್ತಾರೆ. ಆಗ ನಾನು ಸ್ಥಳವನ್ನು ಪರಿಶೀಲಿಸಿರುತ್ತೇನೆ. ಪಂಚಾಯಿತಿಯಿಂದ ಆರೋಪಿ ಮನೆಗೆ 10 ನಿಮಿಷದಲ್ಲಿ ತಲುಪಬಹುದು. ಆರೋಪಿಯ ಮನೆಯ ವಿಸ್ತೀರ್ಣವನ್ನು ತೋರಿಸಲು ಪಂಚಾಯಿತಿ ದಾಖಲೆಗಳು ಇಲ್ಲ. ದೂರಿನಲ್ಲಿ ಎಷ್ಟು ಅತಿಕ್ರಮಣ ಮಾಡಿದ್ದಾರೇ ಎಂದು ಉಲ್ಲೇಖವಿಲ್ಲ. ಪರಮೇಶ್ವರ ಎಂಬ ವ್ಯಕ್ತಿ ಆರೋಪಿಯ ವಿರುದ್ದ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿ ರಸ್ತೆಯನ್ನು ತೇರವುಗೊಳಿಸಿ ಗೋಡೆಯನ್ನು ಕಟ್ಟಿದಾಗ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗಿಲ್ಲ ಎಂದರೆ ಸರಿ. ಪರಮೇಶ್ವರವರು ಆರೋಪಿ ತಮ್ಮ ಜಾಗದಲ್ಲಿ ಗೋಡೆ ಕಟ್ಟಿರುವುದು ತೇರವುಗೊಳಿಸಲು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2ರಲ್ಲಿರುವ ಗೋಡೆ ಆರೋಪಿಯ ಜಾಗದಲ್ಲಿದೇ ಎಂದರೆ ಸರಿ. ಪರಮೇಶ್ವರವರ ಒತ್ತಡಕ್ಕೆ ಮಣಿದು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸಾರ್ವಜನಿಕ ರಸ್ತೆಯನ್ನು ಹಾಳು ಮಾಡಿ ಗೋಡೆ ಕಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಪಂಚಾಯಿತಿ ಸದಸ್ಯರ ಹೆಸರು ಉಲ್ಲೇಖವಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**